ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೬ Part – VI	ಮೈಸೂರು, ಗುರುವಾರ, ೦೨, ಜುಲೈ, ೨೦೨೬ (ಆಷಾಢ, ೧೧, ಶಕವರ್ಷ, ೧೯೪೮) MYSORE, THURSDAY, 02, JULY, 2026 (ASHADHA, 11, SHAKAVARSHA, 1948)	ನಂ. ೧೩ No. 13

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಮಂಡ್ಯ ಜಿಲ್ಲೆ, ಮಂಡ್ಯ.

ದೂರವಾಣಿ ಸಂಖ್ಯೆ :**08232-226074** ಇ-ಮೇಲ್ :**deo.mandya1@gmail.com**

ಸಂಖ್ಯೆ:ಇ.ಎಲ್.ಎನ್(2)ಸಿ.ಆರ್.33/2025-26 **ದಿನಾಂಕ: 29.06.2026**

ಕರಡು ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 5ನೇ ಪ್ರಕರಣದ ಉಪ ಪ್ರಕರಣ (5) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ **ಡಾ. ಕುಮಾರ ಭಾ.ಆ.ಸೇ.,** ಆದ ನಾನು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ.ಪಿ.ಆರ್: 486 ಜಿಪಿಎ 2025, ದಿನಾಂಕ:01.06.2026, 10.06.2026 ಮತ್ತು 25.06.2026 ರಲ್ಲಿ ಹೊರಡಿಸಿರುವ ಸುತ್ತೋಲೆ/ ಮಾರ್ಗಸೂಚಿಯಲ್ಲಿ ಸೂಚಿಸಿರುವಂತೆ 2020 ರ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ತೂಬಿನಕೆರೆ ಗ್ರಾಮಪಂಚಾಯಿತಿಗೆ 2011ರ ಜನಸಂಖ್ಯಾನುಗುಣವಾಗಿ ನಿಗಧಿಪಡಿಸಬೇಕಾಗಿದ್ದ ಸದಸ್ಯರ ಸಂಖ್ಯೆಯನ್ನು ತಪ್ಪಾಗಿ ನಿಗಧಿಪಡಿಸಿರುವುದಾಗಿ ಮಂಡ್ಯ ತಹಶೀಲ್ದಾರ್ ರವರು ವರದಿ ಸಲ್ಲಿಸಿರುವ ಮೇರೆಗೆ ತಪ್ಪಾಗಿ ನಿಗಧಿ ಪಡಿಸಿರುವ ಸದಸ್ಯ ಸಂಖ್ಯೆಯನ್ನು ಸರಿಪಡಿಸುವ ಉದ್ದೇಶದಿಂದ ಸದರಿ ತೂಬಿನಕೆರೆ ಗ್ರಾಮ ಪಂಚಾಯಿತಿಗೆ ಹಂಚಿಕೆಯಾಗಿರುವ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ಈ ಕೆಳಕಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಧೀನಕ್ಕೆ ಒಳಪಡುವ ಪ್ರದೇಶಗಳನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸಿ ಕೋಷ್ಟಕ-1ರ ಅಂಕಣ (1) ರಲ್ಲಿ ಕ್ಷೇತ್ರದ ಸಂಖ್ಯೆ ಅಂಕಣ (2) ರಲ್ಲಿ ಪ್ರತಿ ಕ್ಷೇತ್ರದ ಹೆಸರನ್ನು ಅಂಕಣ (3) ರಲ್ಲಿ ಪ್ರತಿ ಕ್ಷೇತ್ರದ ವ್ಯಾಪ್ತಿಯನ್ನು ಹಾಗೂ ಅಂಕಣ (4) ರಲ್ಲಿ ಆ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗಧಿಪಡಿಸಿ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ತೂಬಿನಕೆರೆ ಗ್ರಾಮ ಪಂಚಾಯಿತಿ ಚುನಾಯಿತ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆಯ ದಿನಾಂಕದಿಂದ 07 (ಏಳು) ದಿನಗಳ ಒಳಗಾಗಿ ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಖುದ್ದಾಗಿ / ಅಂಚೆಯ ಮೂಲಕ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ-571401 ವಿಳಾಸಕ್ಕೆ ಸಲ್ಲಿಸತಕ್ಕದ್ದು, ಅಂಚೆಯ ಮೂಲಕ ಸಲ್ಲಿಸಿದಾಗಲೂ, ಈ ಕಛೇರಿಯಿಂದ ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಜಿಲ್ಲಾಡಳಿತ/ಜಿಲ್ಲಾಧಿಕಾರಿ ಕಛೇರಿ ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ. ಆನ್‌ಲೈನ್ ಮೂಲಕವು (https://mandya.nic.in) ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

ಮಂಡ್ಯ ತಾಲ್ಲೂಕಿನ **36-ತೂಬಿನಕೆರೆ** ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಗೆ ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿ ಕ್ಷೇತ್ರವಾರು ಸದಸ್ಯ ಸ್ಥಾನಗಳ ಹಂಚಿಕೆ ವಿವರ.

ತಾಲ್ಲೂಕಿನ ಹೆಸರು:	ಮಂಡ್ಯ
ಗ್ರಾಮ ಪಂಚಾಯಿತಿ ಸಂಖ್ಯೆ ಮತ್ತು ಹೆಸರು:	**36-ತೂಬಿನಕೆರೆ**
ಒಟ್ಟು ಕ್ಷೇತ್ರಗಳ ಸಂಖ್ಯೆ:	7

ಕೋಷ್ಟಕ-1

ಕ್ಷೇತ್ರದ ಸಂಖ್ಯೆ	ಪ್ರಾದೇಶಿಕ ಚುನಾವಣಾ ಕ್ಷೇತ್ರದ ಹೆಸರು	ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿ	ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆ
(1)	(2)	(3)	(4)
1	ತೂಬಿನಕೆರೆ	ತೂಬಿನಕೆರೆ (ದಾ)	4
2	ಎಲೆಚಾಕನಹಳ್ಳಿ-1	ಎಲೆಚಾಕನಹಳ್ಳಿ ವೈ.ಕೆ. ಕರೀಗೌಡರ ಬೀದಿಯಿಂದ ಕುಂಟ ಬೋರೇಗೌಡರ ಹಿಂಭಾಗದ ಬೀದಿ ಹೊನ್ನ ಗಿರಿಗೌಡರ ಬೀದಿ, ನೀರಿನ ಟ್ಯಾಂಕ್ ಬೀದಿ ಒಳಗೊಂಡಂತೆ, ಗರೀಬಿ ಸೈಟಿನ ಬೀದಿಯಲ್ಲಿ ಕೊನೆಯಾಗುತ್ತದೆ.	2
3	ಎಲೆಚಾಕನಹಳ್ಳಿ-2	ಎಲೆಚಾಕನಹಳ್ಳಿ-ಬೋಜೇಗೌಡರ ಮಿಲ್ ಮನೆಯಿಂದ ವೀರಭದ್ರ ಸ್ವಾಮಿ ದೇವಸ್ಥಾನದ ಬೀದಿ, ಮಾರಿಗುಡಿ ಬೀದಿ, ವಿಶ್ವಕರ್ಮ ಜನಾಂಗದ ಬೀದಿ ಒಳಗೊಂಡಂತೆ ಪಟೇಲ್ ಬೋರೇಗೌಡರ ಬೀದಿಗೆ ಕೊನೆಯಾಗುತ್ತದೆ.	3
4	ನೊದೆಕೊಪ್ಪಲು	ನೊದೆಕೊಪ್ಪಲು	2
5	ರಾಗಿಮುದ್ದನಹಳ್ಳಿ	ರಾಗಿಮುದ್ದನಹಳ್ಳಿ	3
6	ಉರಮಾರಕಸಲಗೆರೆ-1	ಉರಮಾರಕಸಲಗೆರೆ ಮನೆ ನಂ. 1 ರಿಂದ 199	3
7	ಉರಮಾರಕಸಲಗೆರೆ-2	ಉರಮಾರಕಸಲಗೆರೆ ಮನೆ ನಂ. 200 ರಿಂದ 322	2
ಒಟ್ಟು			**19**

ವಿಶೇಷ ಸೂಚನೆ:-

ಮಂಡ್ಯ ಜಿಲ್ಲೆಯ, ಮಂಡ್ಯ ತಾಲ್ಲೂಕು, 36-ತೂಬಿನಕೆರೆ ಗ್ರಾಮ ಪಂಚಾಯಿತಿ ಚುನಾಯಿತ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಯ ಕುರಿತಂತೆ ನಿಗಧಿತ ದಿನಾಂಕದೊಳಗೆ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್‌ನ್ನು ದಿನಾಂಕ:07.07.2026 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕಛೇರಿಯ ನ್ಯಾಯಾಲಯದ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತ್ತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್‌ನಲ್ಲಿ ಭಾಗವಹಿಸಲು ಇಚ್ಛಿಸಿದ್ದಲ್ಲಿ ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು,

ದಿನಾಂಕ: 29.06.2026
ಸ್ಥಳ : ಮಂಡ್ಯ

ಸಹಿ/-
ಜಿಲ್ಲಾಧಿಕಾರಿ
ಮಂಡ್ಯ ಜಿಲ್ಲೆ, ಮಂಡ್ಯ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, **ಮೈಸೂರು**